# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - SATURDAY 11-12-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಈಶಾನ್ಯ ದೇಶಗಳಿಗೆ ಹೆಚ್ಚು ಜೋಳ ರಫ್ತು ಸಾಧ್ಯತೆ

ಈಶಾನ್ಯ ದಿಕ್ಕಿನ ದೇಶಗಳಾದ ಇಂಡೋನೇಶೀಯ, ಮಲೇಶ್ಯಾ, ವಿಯೆಟ್ನಾಂ ಗಳು ಭಾರತದಿಂದ ಹೆಚ್ಚಿನ ಜೋಳ ಖರೀದಿಗೆ ಮುಂದಾಗಿವೆಯೆನ್ನಲಾಗಿದೆ. 2022 ಮಾರ್ಚ್ ವರೆಗೆ ಜೋಳ ಖರೀದಿಸಲು ಭಾರತದ ರಫ್ತುದಾರರಿಗೆ ಹೆಚ್ಚಿನ ವಿಚಾರಣೆಗಳು ಬರುತ್ತಿವೆಯೆನ್ನಲಾಗಿದೆ. ಜಾಗತಿಕ ದರಗಳು ಹಿಂದಿನ 10 ವರ್ಷಗಳ ಗರಿಷ್ಠ ಮಟ್ಟದಿಂದ ಇಳಿದ ನಂತರ ಬೇಡಿಕೆ ಹೆಚ್ಚಳವಾಗುತ್ತಿದೆಯೆಂದು ವ್ಯಾಪಾರಿ ಮೂಲಗಳು ಹೇಳುತ್ತಿವೆ. ಆದರೆ ಭಾರತೀಯ ರಫ್ತುದಾರರು ರಫ್ತಿಗಾಗಿ ತಮ್ಮೊಳಗೆ ತೀವ್ರ ಪೈಪೋಟಿ ಹೊಂದಿದ್ದಾರೆನ್ನಲಾಗಿದೆ. ಮುಂದಿನ ಮೂರು ತಿಂಗಳು ರಫ್ತಿಗಾಗಿ ಬಹಳ ಬೇಡಿಕೆಯಿದ್ದು ಇಂಡೋನೇಶಿಯಾ, ವಿಯೆಟ್ನಾಂ ಹಾಗೂ ಮಲೇಶ್ಯಾ ಗಳಿಗೆ ಹೆಚ್ಚಿನ ರಫ್ತು ಸಾಧ್ಯತೆಯಿದೆ. APEDA ಮೂಲಗಳ ಪ್ರಕಾರ ಎಪ್ರಿಲ್–ಅಕ್ಟೋಬರ್ 2021 ರ ಅವಧಿಯಲ್ಲಿ ಭಾರತದಿಂದ ರೂ. 3836 ಕೋಟಿ ಮೌಲ್ಯದ ಜೋಳ ರಫ್ತಾಗಿದೆಯೆನ್ನಲಾಗಿದ್ದು, ಹಿಂದಿನ ಈ ಅವಧಿಯಲ್ಲಿ ರೂ.2046 ಕೋಟಿ ಮೌಲ್ಯದ ಜೋಳ ರಫ್ತಾಗಿತ್ತೆನ್ನಲಾಗಿದೆ.

## USDA ಮೂಲಗಳ ಪ್ರಕಾರ ಭಾರತದ ಜೋಳ ರಫ್ತು 2021–22 ವರ್ಷದಲ್ಲಿ ಇಳಿಕೆ

USDA ಅಂದಾಜಿನಂತೆ 2021–22 ರಲ್ಲಿ ಭಾರತದಿಂದ 25 ಲಕ್ಷ ಟನ್ ಜೋಳ ರಫ್ತಾಗಲಿದೆ. 2020–2021 ರಲ್ಲಿ 37.5 ಲಕ್ಷ ಟನ್ ಜೋಳ ರಫ್ತಾಗಿತ್ತೆನ್ನಲಾಗಿದೆ.

## ಖಾರಿಫ್ ಬೆಳೆಯಿಂದ ಜೋಳ ಆವಕ ಉತ್ತಮ

ಈ ವರ್ಷದ ಖಾರಿಫ್ ಬೆಳೆಯಿಂದ ಉತ್ತಮ ಗುಣಮಟ್ಟದ ಜೋಳ ಆವಕ ಪ್ರಾರಂಭವಾಗಿದೆಯೆನ್ನಲಾಗಿದೆ. ಒಡಿಶಾ, ಕರ್ನಾಟಕ, ಮಹಾರಾಷ್ಟ್ರ ಗಳಿಂದ ಆವಕವಾಗುತ್ತಿದ್ದು, ಖರೀದಿ ನಡೆಯುತ್ತಿದೆಯೆನ್ನಲಾಗಿದೆ. IGC ಯ ಪ್ರಕಾರ ಜಾಗತಿಕ ಜೋಳ ಉತ್ಪಾದನೆ 1212 ಮಿಲಿಯನ್ ಟನ್ ಆಗಲಿದೆ. ಹಿಂದಿನ ಸೀಸನ್ ನಲ್ಲಿ ಉತ್ಪಾದನೆ 1126 ಮಿಲಿಯನ್ ಟನ್‌ಗಳು, ಇನ್ನೊಂದು ಮೂಲದ ಪ್ರಕಾರ ಜಾಗತಿಕವಾಗಿ 1199.7 ಮಿಲಿಯನ್ ಟನ್ ಜೋಳ ಉತ್ಪಾದನೆಯ ಅಂದಾಜು. ಅದರ ಪ್ರಕಾರ ಹಿಂದಿನ ಸೀಸನ್ ನಲ್ಲಿ 1157.8 ಮಿಲಿಯನ್ ಟನ್ ಉತ್ಪಾದನೆ. ಈ ಸೀಸನ್ ನಲ್ಲಿ ಜಾಗತಿಕ ವ್ಯವಹಾರ ಇಳಿಕೆಯಾಗಲಿದೆಯೆನ್ನಲಾಗಿದೆ.